# ಟೀನೇಜ್ ಲೋಕದತ್ತ ಸಿಂಧೂ ಚಿತ್ತ



‘ಆಚಾರ್ & ಕೋ’ ಸಿನಿಮಾ ಮೂಲಕ ಕನ್ನಡ ಸಿನಿಮಾರಂಗದ ಭರವಸೆಯ ನಿರ್ದೇಶಕಿಯಾಗಿ ಗಮನಸೆಳೆದಿದ್ದ ಸಿಂಧೂ ಶ್ರೀನಿವಾಸಮೂರ್ತಿ, ಹೊಸ ಪ್ರಯೋಗವೊಂದಕ್ಕೆ ಸಿದ್ಧರಾಗಿದ್ದಾರೆ.

‘ಟೀಚರ್ಸ್ ಪೆಟ್’ ಎಂಬ ಇಂಗ್ಲಿಷ್ ಕಾಮಿಡಿ ಚಿತ್ರ ನಿರ್ದೇಶನಕ್ಕೆ ಕೈ ಹಾಕಿದ್ದು, ಕ್ಯಾಥೊಲಿಕ್ ಬೋರ್ಡಿಂಗ್ ಹುಡುಗಿಯರ ಶಾಲೆಯಲ್ಲಿ ನಡೆಯುವ ಸಂಗತಿಗಳೇ ಸಿನಿಮಾ ವಸ್ತುವಾಗಿರಲಿವೆಯಂತೆ. ಟೀನೇಜ್ ಹುಡುಗಿಯರ ಮನೋಲೋಕವನ್ನು ತೆರೆದಿಡುವ ಹೊಸ ಪ್ರಯತ್ನವೆಂದೂ ಹೇಳಿದ್ದಾರೆ.

‘ನಮ್ಮ ಸಿನಿಮಾಗಳು ಇನ್ನೂ ಅನ್ವೇಷಿಸದಂಥ ಯುವಮನಗಳ ಕಥೆಯ ಚಿತ್ರವಿದು. ಯುವಜನತೆಯನ್ನು ತಟ್ಟುವಂತೆ ಹಾಗೂ ಅವರು ಸಿನಿಮಾದಲ್ಲಿ ತಮ್ಮನ್ನು ತಾವೇ ಕಂಡುಕೊಳ್ಳುವ ರೀತಿಯಲ್ಲಿ ಸಿನಿಮಾ ಕಟ್ಟುತ್ತೇವೆ. ಸಾಮಾನ್ಯವಾಗಿ ಪಾಶ್ಚಾತ್ಯ ಸಿನಿಮಾಗಳಲ್ಲಿ ಈ ರೀತಿಯ ಕಥೆಗಳನ್ನು ನೋಡಬಹುದು. ಈ ಸಿನಿಮಾವನ್ನು ಭಾರತೀಯ ಅನುಭವಗಳ ಮೇಲೆಯೇ ರೂಪಿಸಲಾಗುತ್ತಿದೆ’ ಎಂದು ವಿವರಿಸಿದ್ದಾರೆ.

ವಿಕ್ರಮಾದಿತ್ಯ ಮೋಟ್ವಾನಿ, ‘ಆಂದೋಲನ್ ಫಿಲ್ಮ್ಸ್’ ವತಿಯಿಂದ ಸಿನಿಮಾ ನಿರ್ಮಾಣಕ್ಕೆ ಬೆಂಬಲಿಸಿದ್ದಾರೆ. ‘13 ಡೇಸ್’ ಸಿನಿಮಾ ನಿರ್ದೇಶನದಲ್ಲಿಯೂ ಸಿಂಧೂ ತೊಡಗಿಕೊಂಡಿದ್ದು, 2026ಕ್ಕೆ ‘ಟೀಚರ್ಸ್ ಪೆಟ್’ ಸಿನಿಮಾ ಚಿತ್ರೀಕರಣ ಆರಂಭಗೊಳ್ಳಲಿದೆ. ■

# ದ್ವಿಭಾಷೆಯಲ್ಲಿ ಗಣೇಶ್ ಹೊಸ ಸಿನಿಮಾ





ಶ್ರೀನಿವಾಸ ರಾಜು

‘ಕೃಷ್ಣಂ ಪ್ರಣಯ ಸಖಿ’ ಸಿನಿಮಾ ಯಶಸ್ಸಿನ ಬೆನ್ನಲ್ಲೇ ನಟ ಗಣೇಶ್ ಹಾಗೂ ನಿರ್ದೇಶಕ ಶ್ರೀನಿವಾಸ ರಾಜು ಮತ್ತೆ ಹೊಸ ಪ್ರಾಜೆಕ್ಟ್‌ವೊಂದರಲ್ಲಿ ಒಂದಾಗಿದ್ದಾರೆ. ಈ ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಶೀರ್ಷಿಕೆ ಘೋಷಣೆಯಾಗಬೇಕಿದೆ. ಈ ನಡುವೆ, ಸಿನಿಮಾವನ್ನು ಕನ್ನಡ ಹಾಗೂ ಹಿಂದಿ ಎರಡೂ ಭಾಷೆಯಲ್ಲಿಯೂ ಬಿಡುಗಡೆ ಮಾಡುವುದಾಗಿ ಹೇಳಿದ್ದಾರೆ ಶ್ರೀನಿವಾಸ ರಾಜು. ಇದಕ್ಕೆ ಹಲವು ಕಾರಣಗಳನ್ನೂ ನೀಡಿದ್ದಾರೆ ಅವರು.

‘ಬಾಲಿವುಡ್, ದಕ್ಷಿಣ ಭಾರತ ಸಿನಿಮಾ ಕಂಟೆಂಟ್‌ಗಳನ್ನು ಗಮನಿಸುತ್ತಿದೆ. ಈ ಬೆಳವಣಿಗೆ ಕೆಲವು ವರ್ಷಗಳಿಂದೀಚೆಗೆ ಹುರುಪು ಪಡೆದಿದೆ. ಬಹು ದೊಡ್ಡ ಮಟ್ಟದಲ್ಲಿ ಹಿಂದಿ ಪ್ರೇಕ್ಷಕರು ದಕ್ಷಿಣದ ಸಿನಿಮಾಗಳನ್ನು ನೋಡುತ್ತಿದ್ದಾರೆ. ಹಿಂದಿ ಪ್ರೇಕ್ಷಕರಿಗೆ ಗಣೇಶ್ ಅವರನ್ನು ಬೇರೆಯದೇ ರೀತಿ ಪರಿಚಯಿಸಲು ಇದು ಸಕಾಲ’ ಎಂದಿದ್ದಾರೆ.

‘ಸಿನಿಮಾ ಹಿಂದಿ ಆವೃತ್ತಿಯಲ್ಲಿರುತ್ತದೆ. ಹಿಂದಿ ಡೈಲಾಗ್‌ಗಳನ್ನು, ಲಿರಿಕ್ಸ್‌ಗಳನ್ನು ಪರಿಣತರಿಂದ ರೂಪಿಸಲಾಗುತ್ತದೆ. ಹಿಂದಿ ಸಿನಿಮಾ ಮಾರುಕಟ್ಟೆಯನ್ನು ಎಕ್ಸ್‌ಪ್ಲೋರ್ ಮಾಡಲು ಉತ್ಸುಕನಾಗಿದ್ದೇನೆ’ ಎಂದಿದ್ದಾರೆ.

ಈ ನಡುವೆ ಇನ್ನಷ್ಟು ಪ್ರಾಜೆಕ್ಟ್‌ಗಳಲ್ಲಿ ಗಣೇಶ್ ಬ್ಯುಸಿಯಾಗಿದ್ದಾರೆ. ‘ಯುವರ್ಸ್ ಸಿನ್ಸಿಯರ್ಲಿ ರಾಮ್’, ‘ಪಿನಾಕ’ ಹಾಗೂ ಅರಸು ಅಂತಾರೆ ಅವರ ಮತ್ತೊಂದು ಸಿನಿಮಾದಲ್ಲಿ ತೊಡಗಿಕೊಂಡಿದ್ದು, ಚೇತನ್ ಕುಮಾರ್ ಅವರ ಚಿತ್ರವೊಂದಕ್ಕೆ ಗ್ರೀನ್‌ಸಿಗ್ನಲ್ ನೀಡಿದ್ದಾರೆ. ■